**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ ಪಾವಗಡ**

ದಿನಾಂಕಃ 02/06/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರು | ಗಂಗಾಧರಯ್ಯ |
| ತಂದೆ ಹೆಸರು | ಈರಯ್ಯ |
| ವಯಸ್ಸು | 54 ವರ್ಷ |
| ವೃತ್ತಿ | ಮುಖ್ಯೋಪಾಧ್ಯಾಯರು |
| ವಾಸ | ಪಾವಗಡ |

**ಪಿರ್ಯಾದಿಯ ಸತ್ಯಾಪನ ಹೇಳಿಕೆ :**

ನಾನು ರಂಗಸಮುದ್ರದಲ್ಲಿ ಇರುವ ತ್ರಿಯಂಬಕೇಶ್ವರ ಗ್ರಾಮಾಂತರ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಕೆಲಸ ಮಾಡುತ್ತಿದ್ದೇನೆ . ನಾನು ಸದರಿ ಸಂಸ್ಥಗೆ ದಿನಾಂಕಃ 30.07.1999 ರಲ್ಲಿ ಸಹ ಶಿಕ್ಷಕನಾಗಿ ಸೇರಿಕೊಂಡಿರುತ್ತೇ ನೆ. ದಿನಾಂಕಃ 01.10.2005 ರಲ್ಲಿ ನಾನು ಮುಖ್ಯೋಪಾದ್ಯಾಯರಾಗಿ ಮುಂಬಡ್ತಿ ಪಡೆದಿರುತ್ತೇನೆ . 2010 ಸಾಲಿನಲ್ಲಿ 1 ನೇ ಆರೋಪಿ ನಮ್ಮ ಸಂಸ್ಥಗೆ ಕಾರ್ಯದರ್ಶಿಗಳಾಗಿ ಸೇರ್ಪಡೆಯಾಗಿರುತ್ತಾರೆ. ಸದರಿಯವರು ಕಾರ್ಯದರ್ಶಿಗಳಾದ ನಂತರ ಸಂಸ್ಥಗೆ ಹಣದ ಅವಶ್ಯಕತೆ ಇದ್ದು , ಸದರಿ ಹಣವನ್ನು ನಾನು ನೀಡಬೇಕು ಎಂದು ನನಗೆ ತಿಳಿಸಿರುತ್ತಾರೆ . ಆಗ ನಾನು ಸದರಿಯವರಿಗೆ ಹಣ ನೀಡಲು ನನ್ನ ಬಳಿ ಹಣ ಇರುವುದಿಲ್ಲ ಎಂದು ಹೇಳಿರುತ್ತೇನೆ . ನಂತರ ಜುಲೈ 2022 ರಲ್ಲಿ ನಾನು 1 ನೇ ಆರೋಪಿಗೆ ಹಣ ನೀಡಿರುವುದಿಲ್ಲ ಎಂದು ಸದರಿಯವರು ನನ್ನ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಿ ಕೆಲಸದಿಂದ ನನ್ನನ್ನು ಅಮಾನತ್ತು ಮಾಡಿರುತ್ತಾರೆ .

ನಂತರ ಈ ಕುರಿತು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಿಗೆ ನಾನು ಯಾವುದೇ ತಪ್ಪು ಮಾಡಿರುವುದಿಲ್ಲ ಎಂದು ನಿವೇದಿಸಿಕೊಂಡಿರುತ್ತೇನೆ . ಆಗ ಆಯುಕ್ತರು ನನ್ನನ್ನು ಅಮಾನತ್ತು ಪಡಿಸಿದ ಆದೇಶವನ್ನು ಹಿಂಪಡೆಯುವಂತೆ ಆದೇಶವನ್ನು ಹೊರಡಿಸಿರುತ್ತಾರೆ ಹಾಗೂ ನನ್ನನ್ನು ಮುಖ್ಯೋಪಾದ್ಯಾಯರಾಗಿ ಅದೇ ಶಾಲೆಯಲ್ಲಿ ಪುನರ್ ನೇಮಕ ಮಾಡಬೇಕು ಎಂದು ಆದೇಶಿಸಿರುತ್ತಾರೆ. ಆಯುಕ್ತರು ತಮ್ಮ ಆದೇಶವನ್ನು 6 ತಿಂಗಳುಗಳ ಒಳಗಾಗಿ ಕಾರ್ಯ ರೂಪಕ್ಕೆ ತರಬೇಕು ಎಂದು ಆದೇಶಿಸಿರುತ್ತಾರೆ . ಸದರಿ ಆದೇಶದಲ್ಲಿ 6 ತಿಂಗಳುಗಳ ಒಳಗಾಗಿ ನನ್ನನ್ನು ಪುನರ್ ನೇಮಕ ಮಾಡದೆ ಇದ್ದಲ್ಲಿ ನನಗೆ ಸರ್ಕಾರದಿಂದ ಬರಬೇಕಾದ ವೇತನ ಹಾಗೂ ಇತರ ಭತ್ಯೆಗಳನ್ನು ಆಡಳಿತ ಮಂಡಳಿಯವರೆ ಸ್ವಂತ ಸಂಪನ್ಮೂಲಗಳಿಂದ ನೀಡಬೇಕಾಗಿರುತ್ತದೆ ಎಂದು ಆದೇಶಿಸಿರುತ್ತಾರೆ . ಸದರಿ ಆದೇಶದಂತೆ 1 ನೇ ಆರೋಪಿ ನನ್ನನ್ನು ದಿನಾಂಕಃ 28.12.2022 ರಂದು ಮೂಖ್ಯೋಪಾಧ್ಯಾಯರಾಗಿ ಪುನರ್ ನೇಮಕ ಮಾಡಿರುತ್ತಾರೆ . ನಾನು ದಿನಾಂಕಃ 28.12.2022 ರಂದೆ ಮೂಖ್ಯೋಪಾಧ್ಯಾಯರಾಗಿ ಕರ್ತವ್ಯಕ್ಕೆ ವರದಿ ಮಾಡಿರುತ್ತೇನೆ . ನಾನು ಪುನರ್ ನೇಮಕಗೊಂಡ ನಂತರ 1 ನೇ ಆರೋಪಿ ನನ್ನ ಬಳಿ ಪುನಃ ಹಣ ಕೇಳಿರುತ್ತಾರೆ .

ಸದರಿಯವರು ನಾನು ಹಣ ನೀಡಿದರೆ ಮಾತ್ರ ನನಗೆ ಎಚ್. ಎಂ. ಹುದ್ದೆಯ ಚಾರ್ಜ್ ನ್ನು ನೀಡುವುದಾಗಿ ತಿಳಿಸಿರುತ್ತಾರೆ . ನನ್ನನ್ನು 1 ನೇ ಆರೋಪಿ ಮೂಖ್ಯೋಪಾಧ್ಯಾಯರ ಕುರ್ಚಿಯಲ್ಲಿ ಕೂರಲು ಅವಕಾಶ ಕೊಡದೇ ನನ್ನ ಕೊಠಡಿಗೆ ಬೀಗವನ್ನು ಹಾಕಿರುತ್ತಾರೆ . 1 ನೇ ಆರೋಪಿಯೊಂದಿಗೆ 2 ನೇ ಮತ್ತು 3 ನೇ ಆರೋಪಿತರು ಶಾಮೀಲಾಗಿ ನನ್ನ ಬಳಿ ರೂ. 5 ಲಕ್ಷ ಹಣ ಹಾಗೂ ಪ್ರತಿ ತಿಂಗಳು ರೂ. 5 ಸಾವಿರ ಹಣ ನೀಡಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟಿರುತ್ತಾರೆ . ಸದರಿ ಹಣವನ್ನು ಕೊಡಲು ಸಾಧ್ಯವಿಲ್ಲ ಎಂದು ನಾನು ಸದರಿಯವರಿಗೆ ತಿಳಿಸಿರುತ್ತೇನೆ . 4 ರಿಂದ 10 ನೇ ಆರೋಪಿತರು 1 ರಿಂದ 3 ನೇ ಆರೋಪಿತರ ಜೊತೆ ಶಾಮೀಲಾಗಿ ನಾನು ಕೆಳವರ್ಗದ ಜಾತಿಗೆ ಸೇರಿದವನು ಎಂದು ನನ್ನನ್ನು ನಿಂದಿಸಿ ನಾನು ಸಹಾಯಕ ಶಿಕ್ಷಕನಾಗಿಯೇ ಮುಂದುವರೆಯ ಬೇಕೆಂದು ಹೇಳಿರುತ್ತಾರೆ . ಅದು ಸಾಧ್ಯವಾಗದಿದ್ದರೆ ಆಡಳಿತ ಮಂಡಳಿಯವರು ಕೇಳಿದ ಹಣವನ್ನು ನೀಡಬೇಕು ಎಂದು ಆರೋಪಿತರೆಲ್ಲರೂ ನನ್ನ ಮೇಲೆ ಒತ್ತಾಯ ಹೇರಿರುತ್ತಾರೆ . ಈ ಸಂಬಂಧ ಇಲಾಖೆಯಲ್ಲಿ ವಿಚಾರಣೆ ಆಗುತ್ತಿದ್ದು , ಮೇಲಿನ ಅಂಶಗಳನ್ನು ಪರಿಗಣಿಸಿ ಆರೋಪಿತರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಪ್ರಾರ್ಥಿಸುತ್ತೇನೆ.

ಈ ಹಂತದಲ್ಲಿ ಪಿರ್ಯಾದಿಯು ಮುಂದಿನ ಸತ್ಯಾಪನ ಹೇಳಿಕೆಗೆ ಕಾಲವಕಾಶ ಕೋರಿದ್ದು , ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ**

**ಪಿ ಸಿ ಜೆ ಮತ್ತು ಜೆ ಎಂ ಎಫ್ ಸಿ**
**ಪಾವಗಡ**